# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 307
ಸದಸ್ಯರ ಹೆಸರು : ಶ್ರೀ ಸಿ. ಟಿ. ರವಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಚಿಕ್ಕಮಗಳೂರು ಜಿಲ್ಲೆಯ ದತ್ತಪೀಠ ಸೇರಿದಂತೆ ಮಲೆನಾಡು ಪ್ರದೇಶಗಳಿಗೆ ಕೆ.ಎಸ್.ಆರ್.ಟಿ.ಸಿ ಬಸ್ ಸೇವೆ ಒದಗಿಸಲು ಮಿನಿ ಬಸ್‌ಗಳ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿದೆ. ಚಿಕ್ಕಮಗಳೂರು ಜಿಲ್ಲೆಯ ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಚಿಕ್ಕಮಗಳೂರು ವಿಭಾಗದ ವತಿಯಿಂದ 201 ಸಾಮಾನ್ಯ ಸಾರಿಗೆಗಳಿಂದ 1644 ಏಕ ಸುತ್ತುವಳಿಗಳನ್ನು ಹಾಗೂ 330 ವೇಗದೂತ ಸಾರಿಗೆಗಳಿಂದ 1163 ಏಕ ಸುತ್ತುವಳಿಗಳು ಸೇರಿದಂತೆ ಒಟ್ಟು 531 ಸಾರಿಗೆಗಳಿಂದ 2807 ಏಕ ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಪ್ರಸ್ತುತ ಚಿಕ್ಕಮಗಳೂರು ವ್ಯಾಪ್ತಿಯ ಮಲೆನಾಡು ಭಾಗಗಳಲ್ಲಿ ಗುಡ್ಡಗಾಡು ರಸ್ತೆಗಳಿರುವ ಮಾರ್ಗಗಳಾದ ಚಿಕ್ಕಮಗಳೂರು-ದತ್ತಪೀಠ ಮಾರ್ಗಕ್ಕೆ ಅನುಸೂಚಿ ಸಂಖ್ಯೆ:16ರಲ್ಲಿ ಪ್ರತಿ ದಿನ 06 ಏಕ ಸುತ್ತುವಳಿಗಳನ್ನು ಹಾಗೂ ಚಿಕ್ಕಮಗಳೂರು-ನಿಡಗೋಡು ಮಾರ್ಗದಲ್ಲಿ **08 ಏಕ ಸುತ್ತುವಳಿಗಳ ಮಿನಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು**, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಸದರಿ ಸಾರಿಗೆಯ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಪ್ರಸ್ತುತ ಚಿಕ್ಕಮಗಳೂರು ಘಟಕದಲ್ಲಿ 05 ಮಿಡಿ ಬಸ್‌ಗಳು ಕಾರ್ಯಾಚರಣೆಯಲ್ಲಿದ್ದು, ಅವುಗಳು ಸುಸ್ಥಿತಿಯಲ್ಲಿರುತ್ತವೆ. |
| ಆ | ಚಿಕ್ಕಮಗಳೂರಿನಲ್ಲಿ ಈಗ ಇರುವ ಮಿನಿ ಬಸ್‌ಗಳ ಸಂಖ್ಯೆ ಎಷ್ಟು; ಅವುಗಳು ಸುಸ್ಥಿತಿಯಲ್ಲಿವೆಯೇ; | |
| ಇ | ಚಿಕ್ಕಮಗಳೂರು ವಿಭಾಗಕ್ಕೆ ಹೊಸ ಮಿನಿ ಬಸ್‌ಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದರೆ ಯಾವಾಗ ಎಷ್ಟು ಮಿನಿ ಬಸ್‌ಗಳನ್ನು ಒದಗಿಸಲಾಗುವುದು? (ವಿವರ ನೀಡುವುದು). | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 7 ವರ್ಷಗಳಿಂದ ಸಿಬ್ಬಂದಿ ನೇಮಕಾತಿಯಾಗಿರಲಿಲ್ಲ ಹಾಗೂ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ.**<br><br>ಆದರೆ ಪ್ರಸ್ತುತ 2023-24 ಹಾಗೂ 2024-25ನೇ (ಈವರೆಗೆ) ಒಟ್ಟು 1118 ಹೊಸ ಬಸ್‌ಗಳನ್ನು ಸೇರ್ಪಡೆ ಮಾಡಲಾಗಿದೆ ಹಾಗೂ 20 ಹೊಸ ಬಸ್‌ಗಳನ್ನು ಸೇರ್ಪಡೆಗೊಳಿಸಲು ಯೋಜಿಸಲಾಗಿದೆ.<br><br>ಮುಂದುವರೆದು, ನಿಗಮದಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಅಲ್ಲದೇ, ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ 194 ಹುದ್ದೆಗಳನ್ನು ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮೇಲ್ಕಂಡಂತೆ, ವಾಹನಗಳ ಸೇರ್ಪಡೆ ಮತ್ತು ಸಿಬ್ಬಂದಿ ನೇಮಕಾತಿ ನಂತರ ಸದರಿ ವಿಭಾಗಕ್ಕೆ ವಾಹನಗಳ ಅಗತ್ಯತೆ ಪರಿಗಣಿಸಿ, ಮಿನಿ/ ಮಿಡಿ ಬಸ್‌ಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 211 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು